ಸಮಾಜದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸವಲತ್ತುಗಳನ್ನು ಹೆಚ್ಚುವ ಬಗ್ಗೆ

೨೬೨. ಶ್ರೀ ಟಿ. ಎಸ್ ಮಣಿ (ಕೆ.ಜಿ.ಎಫ್.) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳೊಂದಿಗೆ ಸಮಾಜದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸವಲತ್ತುಗಳನ್ನು ಹೆಚ್ಚಲಾಗುತ್ತಿದೆಯೆ ?

ಬಿ) ಕೆ.ಜಿ.ಎಫ್. ಮೈಸೂರು ಬೆಂಗಳೂರು ಮಂತ್ರಿತರ ಪಟ್ಟಣ ಮತ್ತು ನಗರಗಳಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ಇತರೆಗಳಲ್ಲಿ ಹೆಚ್ಚಿನ ಮೊತ್ತದ ಶುಲ್ಕವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದರೆ ಇದನ್ನು ತಡೆಯಲು ತೆಗೆದುಕೊಂಡ ಕ್ರಮ ?

ಸಿ) ಕೆ.ಜಿ.ಎಫ್.ನಲ್ಲಿ ಸರ್ಕಾರವು ಸ್ನಾತಕೋತ್ತರ ಪದವಿ ತರಗತಿಗಳನ್ನು ಪ್ರಾರಂಭಿಸುತ್ತದೆಯೆ ?

ಡಿ) ಕೆ.ಜಿ.ಎಫ್.ನಲ್ಲಿ ವೃತ್ತಿಪರ ಸಂಸ್ಥೆಗಳನ್ನು ಅಂದರೆ, ಮೆಡಿಕಲ್, ಪಾಲಿಟೆಕ್ನಿಕ್ ಇಂಜಿನೀಯರಿಂಗ್ ಹಾಗೂ ಇತರೆ ತರಗತಿಗಳನ್ನು ಪ್ರಾರಂಭಿಸಲು ಯಾವುದಾದರೂ ಯೋಜನೆಗಳಿವೆಯೆ ?

ಶ್ರೀ ಡಿ. ಮಂಜುನಾಥ (ಶಿಕ್ಷಣ ಮಂತ್ರಿಗಳು) —

ಎ) ಹೌದು.

ಬಿ) ಇಲ್ಲ.

ಸಿ) ಇಲ್ಲ.

ಡಿ) ಇಲ್ಲ.

ಸಭೆಯು ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್— ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಂಡಿಸಲು ಭಾರತ ಸಂವಿಧಾನದ ೧೫೧ (೨)ನೇ ಅನುಚ್ಛೇದದ ಮೇರೆಗೆ

೧) ೧೯೮೪-೮೫ನೇ ಸಾಲಿನ (ರಾಜಸ್ವ ಸ್ವೀಕೃತಿ) ಬಗ್ಗೆ ಭಾರತದ ನಿಯಂತ್ರಕ ಮಹಾಲೇಖಾ ಪರೀಕ್ಷಕರ ವರದಿ.

ಹಾಗೂ

೨) ೧೯೮೪-೮೫ನೇ ಸಾಲಿನ ಹಣ ವಿನಿಯೋಗ ವಾರ್ತಾ ವಿತ್ತೀಯ ಲೆಕ್ಕಗಳ ಬಗ್ಗೆ ಭಾರತದ ನಿಯಂತ್ರಕ ಮಹಾಲೇಖಾ ಪರೀಕ್ಷಕರ (ಸಿವಿಲ್) ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು— ಕಾಗದ ಪತ್ರಗಳನ್ನು ಸಭೆಯು ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಮೊಹಮದ್ ಮೊಯಿನುದ್ದೀನ್— ಭಾರತದ ನಿಯಂತ್ರಕ ಮಹಾಲೇಖಾಪಾಲಕರ ೧೯೭೯-೮೦, ೧೯೮೦-೮೧, ೧೯೮೧-೮೨ ಸಾಲುಗಳ (ವಾಣಿಜ್ಯ) ವರದಿಯಲ್ಲಿ ಮೈಸೂರು ಪೇಪರ್ ಮಿಲ್ಸ್‌ಗೆ ಸಂಬಂಧಿಸಿದಂತೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಇಪ್ಪತ್ತೈದನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು— ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.